# ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

**ಜಿ.ಎಂ. ಹೇಮಲತ[1] & ಹೆಚ್. ವಿಶ್ವನಾಥ್[2]**

[1]ಸಂಶೋಧನಾರ್ಥಿ, ಡಾ.ಎಂ. ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

[2]ಪ್ರಾಧ್ಯಾಪಕರು, ಡಾ.ಎಂ. ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

DOI: https://doi.org/10.5281/zenodo.15791136

## ABSTRACT:

ಜನಪದ ಸಾಹಿತ್ಯವು ಸಮಾಜದ ಸಾಮಾನ್ಯ ಜನರ ಬದುಕಿನ ಕನ್ನಡಿಯಾಗಿದೆ. ಇದು ತಲೆಮಾರುಗಳಿಂದ ಮೌಖಿಕವಾಗಿ ಹರಿದುಬಂದ ಸಮೃದ್ಧ ಪರಂಪರೆಯಾಗಿದ್ದು, ಅದರಲ್ಲಿ ಮಹಿಳೆಯರ ಸಂವೇದನೆಗಳು, ಅನುಭವಗಳು ಮತ್ತು ಆಂತರಿಕ ಲೋಕವು ಹಾಸುಹೊಕ್ಕಾಗಿವೆ. ಪುರುಷಪ್ರಧಾನ ಸಮಾಜದಲ್ಲಿ ತಮ್ಮ ಭಾವನೆಗಳನ್ನು, ಅನಿಸಿಕೆಗಳನ್ನು ನೇರವಾಗಿ ವ್ಯಕ್ತಪಡಿಸಲು ಸೀಮಿತ ಅವಕಾಶಗಳನ್ನು ಹೊಂದಿದ್ದ ಮಹಿಳೆಯರಿಗೆ, ಜನಪದ ಸಾಹಿತ್ಯವು ಒಂದು ಪ್ರಬಲ ಅಭಿವ್ಯಕ್ತಿ ಮಾಧ್ಯಮವಾಗಿ ಕಾರ್ಯನಿರ್ವಹಿಸಿದೆ. ಜನಪದ ಹಾಡುಗಳು, ಲಾವಣಿಗಳು, ಒಗಟುಗಳು, ಗಾದೆಗಳು ಮತ್ತು ಕಥೆಗಳ ಮೂಲಕ ಮಹಿಳೆಯರು ತಮ್ಮ ದೈನಂದಿನ ಬದುಕಿನ ವಿವಿಧ ಆಯಾಮಗಳನ್ನು ಅನಾವರಣಗೊಳಿಸಿದ್ದಾರೆ. ಕುಟುಂಬದೊಳಗೆ ಎದುರಿಸುವ ಸವಾಲುಗಳು, ಸಾಂಸಾರಿಕ ಜೀವನದ ಸುಖ–ದುಃಖಗಳು, ಪಿತೃಪ್ರಧಾನ ವ್ಯವಸ್ಥೆಯ ನಿರ್ಬಂಧಗಳು, ಅತ್ತೆ–ಸೊಸೆ ಸಂಬಂಧದ ಸಂಕೀರ್ಣತೆ, ತಾಯ್ತನದ ಮಹತ್ವ, ಮಕ್ಕಳ ಪೋಷಣೆಯ ಜವಾಬ್ದಾರಿ, ಗಂಡನ ಅಗಲಿಕೆ ಅಥವಾ ವಲಸೆಯಿಂದ ಉಂಟಾಗುವ ವಿರಹ ವೇದನೆ, ಮತ್ತು ದೈಹಿಕ ಶ್ರಮದಿಂದ ಉಂಟಾಗುವ ನೋವುಗಳು – ಇವೆಲ್ಲವೂ ಅವರ ಹಾಡುಗಳಲ್ಲಿ, ಕಥೆಗಳಲ್ಲಿ ಸ್ಪಷ್ಟವಾಗಿ ಮೂಡಿಬಂದಿವೆ. ಜನಪದ ಸಾಹಿತ್ಯವು ಕೇವಲ ನೋವು ಅಥವಾ ಪ್ರತಿರೋಧಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ಮಹಿಳೆಯರ ಸಹಜ ಹಾಸ್ಯಪ್ರಜ್ಞೆ, ಸೃಜನಶೀಲತೆ, ಬದುಕಿನ ಕುರಿತ ಆಳವಾದ ತಿಳುವಳಿಕೆ ಮತ್ತು ಸಂಬಂಧಗಳನ್ನು ಪೋಷಿಸುವ ಅವರ ಅನನ್ಯ ಸಾಮರ್ಥ್ಯವನ್ನೂ ಸಹ ಬಿಂಬಿಸುತ್ತದೆ. ಪ್ರಕೃತಿಯೊಂದಿಗೆ ಅವಳಿಗಿರುವ ಬಾಂಧವ್ಯ, ಹಬ್ಬ–ಹರಿದಿನಗಳಲ್ಲಿನ ಆಚರಣೆಗಳು ಮತ್ತು ಧಾರ್ಮಿಕ ನಂಬಿಕೆಗಳು ಸಹ ಅವರ ಸಂವೇದನೆಗಳ ಭಾಗವಾಗಿ ಜನಪದ ಕೃತಿಗಳಲ್ಲಿ ಕಾಣಿಸಿಕೊಳ್ಳುತ್ತವೆ. ಒಟ್ಟಾರೆ, ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯು ಮಹಿಳೆಯರ ಆಂತರಿಕ ಶಕ್ತಿ, ಸಾಮಾಜಿಕ ಅರಿವು ಮತ್ತು ಪ್ರತಿರೋಧದ ಮನೋಭಾವವನ್ನು ಅನಾವರಣಗೊಳಿಸುತ್ತದೆ. ಇದು

ಪುರುಷ-ಪ್ರಧಾನ ನಿರೂಪಣೆಯಲ್ಲಿ ಸಾಮಾನ್ಯವಾಗಿ ಮರೆಯಾಗುವ ಅಥವಾ ವಿರೂಪಗೊಳ್ಳುವ ಸ್ತ್ರೀ ಅನುಭವಗಳಿಗೆ ಒಂದು ಅಧಿಕೃತ ಧ್ವನಿಯನ್ನು ನೀಡುತ್ತದೆ.

**KEYWORDS:**

ಜನಪದ, ಸಂವೇದನೆ, ಹೆಣ್ಣು, ಕುಟುಂಬ, ಭಾವನೆ, ಪುರುಷ.

ಜನಪದ ಸಾಹಿತ್ಯವು ಜಾಗತಿಕವಾಗಿ ಅನಕ್ಷರಸ್ಥ ಮತ್ತು ಶೋಷಿತ ಸಮುದಾಯಗಳ ಭಾವನೆಗಳನ್ನು ಅಭಿವ್ಯಕ್ತಪಡಿಸುವ ಅತ್ಯಂತ ಮಹತ್ವದ ಮಾಧ್ಯಮವಾಗಿದೆ. ಮೌಖಿಕ ಪರಂಪರೆಯಾಗಿ ಹರಿದುಬಂದ ಈ ಸಾಹಿತ್ಯ ಪ್ರಕಾರದಲ್ಲಿ, ಪುರುಷರಷ್ಟೇ ಮಹಿಳೆಯರೂ ತಲೆಮಾರುಗಳಿಂದ ಕೊಡುಗೆ ನೀಡಿದ್ದಾರೆ. ಆದರೆ, ಐತಿಹಾಸಿಕವಾಗಿ ಅನಕ್ಷರತೆ ಮತ್ತು ಪುರುಷ ಪ್ರಧಾನ ಸಮಾಜದ ಪ್ರಾಬಲ್ಯದಿಂದಾಗಿ, ಮಹಿಳೆಯರ ನಿಜವಾದ ಭಾವನೆಗಳು ಮತ್ತು ಅನುಭವಗಳು ಹೆಚ್ಚಾಗಿ ತೆರೆಮರೆಗೆ ಸರಿದಿವೆ. ಈ ಹಿನ್ನೆಲೆಯಲ್ಲಿ, ಜನಪದ ಸಾಹಿತ್ಯವು ಮಹಿಳೆಯರ ಆಂತರಿಕ ಲೋಕವನ್ನು ಅರ್ಥಮಾಡಿಕೊಳ್ಳಲು ವಿಶ್ವಾಸಾರ್ಹ ಮೂಲವಾಗಿ ನಿಲ್ಲುತ್ತದೆ. ಆದಿಮಾನವನ ಕಾಲದಿಂದಲೂ ಸ್ತ್ರೀ-ಪುರುಷರ ನಡುವಿನ ದೈಹಿಕ ವ್ಯತ್ಯಾಸವನ್ನು ಗುರುತಿಸಲಾಗುತ್ತಿತ್ತು. ಆದರೆ, ಈ ಲಿಂಗಭೇದವು ಕೇವಲ ಗುರುತಿಸುವಿಕೆಗೆ ಸೀಮಿತವಾಗಿರದೆ, ಕಾಲಾಂತರದಲ್ಲಿ ಪುರುಷ ಪ್ರಧಾನತೆ ಹೆಚ್ಚಾಗಿ ಸ್ತ್ರೀ ಸಮಾಜವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಕಾರಣವಾಯಿತು. ಸ್ಮೃತಿಕಾರರು ಪುರುಷರಾಗಿದ್ದ ಕಾರಣ, ಮಹಿಳೆಯರ ಜೀವನಶೈಲಿ ಮತ್ತು ನಡೆ-ನುಡಿಗಳನ್ನು ಪುರುಷ ದೃಷ್ಟಿಕೋನದಿಂದಲೇ ವ್ಯಾಖ್ಯಾನಿಸಲಾಯಿತು. ಕೋಮಲತೆ, ಸಹನೆ, ತಾಳ್ಮೆ, ತ್ಯಾಗದಂತಹ ಗುಣಗಳನ್ನು ಮಹಿಳೆಯರಿಗೆ ಆರೋಪಿಸಲಾಯಿತು. ಕುಟುಂಬದಲ್ಲಿ ಪುರುಷನ ಸ್ಥಾನವನ್ನು ಮೇಲ್ದರ್ಜೆಗೇರಿಸಿ, ಮಹಿಳೆಯನ್ನು ಕೆಳಮಟ್ಟದಲ್ಲಿರಿಸಲಾಯಿತು. ಶೀಲದ ವಿಷಯದಲ್ಲಿ ದ್ವಿಸ್ತರ ನೀತಿಯನ್ನು ಜಾರಿಗೆ ತರಲಾಯಿತು. ಪುರುಷರ ದೈಹಿಕ ಬಲವನ್ನು 'ಪೌರುಷ' ಎಂದು ವೈಭವೀಕರಿಸಿದ ಸಮಾಜ, ಮಹಿಳೆಯರ ಸಂತಾನೋತ್ಪತ್ತಿ ಶಕ್ತಿಯನ್ನು ಅದೇ ರೀತಿ ನೋಡದೆ, ಬದಲಾಗಿ ಆ ಶಕ್ತಿಯನ್ನೇ ಅವರ ಗೃಹಬಂಧನಕ್ಕೆ ಒಂದು ಸಾಧನವನ್ನಾಗಿ ಬಳಸಿಕೊಂಡಿತು. 'ಹೆಣ್ಣು ತಿರುಗಿ ಕೆಟ್ಟಳು, ಗಂಡು ಕುಳಿತು ಕೆಟ್ಟ' ಎಂಬಂತಹ ಗಾದೆ ಮಾತುಗಳ ಮೂಲಕ ಮಹಿಳೆಯರು ಹೊಸ್ತಿಲ ಹೊರಗೆ ಹೋಗುವುದನ್ನು ನಿಷೇಧಿಸಲಾಯಿತು. ಅಷ್ಟೇ ಅಲ್ಲದೆ, ಅವರಿಗೆ ಅಗತ್ಯ ಶಿಕ್ಷಣವನ್ನೂ ನಿರಾಕರಿಸಿ, 'ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ' ಎಂದು ಸಾರಲಾಯಿತು. ಇಂತಹ ಹೇಳಿಕೆಗಳನ್ನು ಪ್ರಶ್ನಿಸಲು ಸಾಧ್ಯವಾಗದೆ, ಮಹಿಳೆಯರು ತಮ್ಮ ಅಸ್ತಿತ್ವದ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳುವಂತಾಯಿತು. ಹೀಗೆ, ಪುರುಷರು ಮಹಿಳೆಯರ ಜೈವಿಕ ವ್ಯತ್ಯಾಸವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ವ್ಯಾಖ್ಯಾನಿಸಿ,

ಅವರ ಮಾನಸಿಕ ಸ್ಥಿತಿಯನ್ನು ಹತ್ತಿಕ್ಕಿದರು. ಸ್ತ್ರೀಯರು ತಮ್ಮನ್ನು ಪುರುಷರ ದೃಷ್ಟಿಕೋನದಿಂದಲೇ ನೋಡಿಕೊಳ್ಳುವಂತಹ ಸ್ಥಿತಿಯನ್ನು ತಲುಪಿದರು. ಕುಟುಂಬದಲ್ಲಿ ಪುರುಷರು ಜೀವನವನ್ನು ಅನುಭವಿಸಿದರೆ, ಸ್ತ್ರೀಯರು ತಾಯಿ, ಹೆಂಡತಿ, ಪ್ರೇಯಸಿ ಹೀಗೆ ವಿಭಿನ್ನ ಪಾತ್ರಗಳಲ್ಲಿ ಪುರುಷರಿಗಾಗಿಯೇ ಬದುಕಬೇಕಾಯಿತು. ಇದು ಒಂದೇ ದಿನದಲ್ಲಿ ರೂಪುಗೊಂಡದ್ದಲ್ಲ, ಬದಲಿಗೆ ಕ್ರಮೇಣವಾಗಿ ಮಹಿಳೆಯರು ಈ ರೀತಿಯ ಜೀವನಕ್ಕೆ ಒಗ್ಗಿಕೊಂಡರು. ಆದರೆ, ತಮ್ಮಲ್ಲಿ ಅಡಗಿದ್ದ ಸ್ವಾತಂತ್ರ್ಯದ ಆಸೆ ಮತ್ತು ಕಳೆದುಹೋದ ಹಕ್ಕುಗಳನ್ನು ಮಹಿಳೆಯರು ಜನಪದ ಸಾಹಿತ್ಯದ ಮಾಧ್ಯಮಗಳಲ್ಲಿ ವಿವಿಧ ರೂಪಗಳಲ್ಲಿ ವ್ಯಕ್ತಪಡಿಸಿದ್ದಾರೆ. ಕೆಲವೊಮ್ಮೆ ನೋವಿನ ನರಳಾಟದಿಂದ, ಮತ್ತೊಮ್ಮೆ ದೇವರ ಮೊರೆಹೋಗುವ ಮೂಲಕ, ಇನ್ನೊಮ್ಮೆ ತ್ಯಾಗದ ಮೂಲಕ, ಮತ್ತು ಕೆಲವೊಮ್ಮೆ ಸಿಡಿದೇಳುವ ಮೂಲಕ ತಮ್ಮ ಅಂತರಂಗದ ಭಾವನೆಗಳನ್ನು ಹೊರಹಾಕಿದ್ದಾರೆ. ಸ್ತ್ರೀ ಸಂವೇದನೆಯನ್ನು ಗುರುತಿಸುವಾಗ, ಜೀವನದ ಸಹಜ ಅನುಭವಗಳು ಮನುಷ್ಯನೊಳಗಿನ ವಿರೋಧಾಭಾಸಗಳನ್ನು ಅನಾವರಣಗೊಳಿಸುತ್ತವೆ ಮತ್ತು ಒಂದು ನಿರ್ದಿಷ್ಟ ಹಂತದಲ್ಲಿ ನಿಲ್ಲುತ್ತವೆ. ಈ ವಿರೋಧಾಭಾಸಗಳ ನಡುವೆ, ಹೊಸತನಕ್ಕಾಗಿ ಹಾತೊರೆಯುವ ಪ್ರಕ್ರಿಯೆಯಲ್ಲೇ ಸಂವೇದನೆಯ ನೆಲೆ ನಿರ್ಮಾಣವಾಗುತ್ತದೆ. ಆದರೆ, ಸಂವೇದನೆಯ ಸ್ವರೂಪ ಸರಳವಲ್ಲ. ಅದು ಸಂತೋಷದೊಳಗೆ ಸಂಕಟವನ್ನೂ, ಸಂಕಟದೊಳಗೆ ಸುಖವನ್ನೂ ಮತ್ತು ಸುಖ-ದುಃಖಗಳ ಸುಳಿಯನ್ನೇ ಒಳಗೊಂಡಿರುತ್ತದೆ. ಸಂವೇದನೆ ಎಂದರೆ ಯಾವುದೇ ವ್ಯಕ್ತಿಯ ಅಂತರಂಗದ ನೋವಿನ ಅಭಿವ್ಯಕ್ತಿ ಎಂದು ಹೇಳಬಹುದು. ಸ್ತ್ರೀ ಸಂವೇದನೆಯನ್ನುವುದು ಪುರುಷನಿಗೆ ಸಮಾನಂತರವಾಗಿ ಸವಾಲುಗಳನ್ನು ರೂಪಿಸುವುದಲ್ಲ. ಅದು ನಿತ್ಯದ ಅನುಭವಗಳಿಂದಲೇ ಆಗಿದೆ. ಸ್ತ್ರೀಯರು ತಮ್ಮ ಬದುಕಿನ ಅನುಭವಗಳನ್ನು ಹೊರಹಾಕಲು ಬಳಸಿದ ಮೌಖಿಕ ಮಾಧ್ಯಮವೇ ಜನಪದ ಸಾಹಿತ್ಯ. ಸಂವೇದನೆಯು ವ್ಯಕ್ತಿನಿಷ್ಠ ಪ್ರತಿಭೆಯ ಒಂದು ಅಭಿವ್ಯಕ್ತಿಯಾಗಿದೆ.

ಜನಪದ ಸಾಹಿತ್ಯ ಹುಟ್ಟಿದ್ದು ಜನಪದರ ದುಡಿಮೆಯೊಂದಿಗೆ ಜನಪದರು ಜ್ಞಾನ ಪ್ರದರ್ಶನಕ್ಕಾಗಲಿ ಅಥವಾ ಬಿರುದುಗಳಿಗಾಗಲಿ ಸಾಹಿತ್ಯವನ್ನು ರಚಿಸಲಿಲ್ಲ. ಅವರು ತಮ್ಮ ದಿನನಿತ್ಯದ ಜೀವನದಲ್ಲಿ ಅನುಭವಿಸಿದ ನೋವು-ನಲಿವುಗಳನ್ನು, ಅದರಲ್ಲೂ ಜನಪದ ಹೆಣ್ಣು ಮಕ್ಕಳು ತಮ್ಮ ಸುಖ-ದುಃಖಗಳನ್ನು ಹಾಡುಗಳ ಮೂಲಕ ಹೊರಹಾಕಿದರು. ಹೀಗೆ, ಭಾವನೆಗಳು ಮಾತಿನಲ್ಲಿ ಮೂಡಿ, ಉಸಿರಾಗಿ ಒಡೆದು ಹಾಡುಗಳಾಗಿ ಹರಿದವು. ಜನಪದ ಸಾಹಿತ್ಯವನ್ನು ಮಹಿಳೆಯರು ಅಥವಾ ಪುರುಷರು ರಚಿಸಿದ್ದಾರೆ ಎಂದು ಬೇರ್ಪಡಿಸುವುದು ಕಷ್ಟ. ಆದರೆ, ಅದರ ಹಿಂದಿನ ಆಶಯ ಮತ್ತು ಭಾವನೆಗಳನ್ನು ಗುರುತಿಸಿದರೆ ಬೇರ್ಪಡಿಸಬಹುದು. ಈ ನಿಟ್ಟಿನಲ್ಲಿ, ಜನಪದ ಸಾಹಿತ್ಯದಲ್ಲಿ ಮಹಿಳೆಯರ ಪಾಲು ಗರಿಷ್ಠವಾಗಿದೆ. ಶಿಷ್ಟ ಸಾಹಿತ್ಯದಲ್ಲಿ

ಮೌನವಾಗಿದ್ದ ಮಹಿಳೆ ಜನಪದ ಸಾಹಿತ್ಯದಲ್ಲಿ ಮನಬಿಚ್ಚಿ ಮಾತನಾಡಿದ್ದಾಳೆ. ಹೆಣ್ಣಿನ ಜೀವನದ ಭಾವನೆಗಳಿಗೆ ಸ್ಪಂದಿಸಿದ್ದಾಳೆ ಮತ್ತು ಅದರ ಬಗ್ಗೆ ಆಳವಾಗಿ ಚಿಂತಿಸಿದ್ದಾಳೆ. ಪುರುಷ ಪ್ರಧಾನ ಮೌಲ್ಯಗಳಲ್ಲಿ ಸಿಲುಕಿದ ಮಹಿಳೆಯ ಬಗ್ಗೆ ತನ್ನ ಸಂವೇದನೆಯನ್ನು ಅಹಿಂಸೆಯಿಂದ ವ್ಯಕ್ತಪಡಿಸಿದ್ದಾಳೆ. ಮಾನವ ಕೃಷಿ ಹಂತಕ್ಕೆ ಕಾಲಿಟ್ಟಾಗ ಸ್ತ್ರೀ ತನ್ನ ಜೈವಿಕ ಕಾರಣಗಳಿಂದ ಮನೆಯೊಳಗೆ ಉಳಿದಳು. ಪುರುಷ ಪಶು ಸಂಪತ್ತು, ಆರ್ಥಿಕ ಸಂಪತ್ತನ್ನು ಬಲಪಡಿಸಿದಾಗ ಗಣ ಸಮೂಹದ ನಾಯಕತ್ವ ಹೊಂದಿದ್ದು ಇದರಿಂದ ಪಿತೃಸ್ಥಾನ ಬಲಗೊಂಡಿತು. ಮಾತೃ ಸಂಸ್ಕೃತಿ ಹಿಂದೆ ಸರಿಯಿತು. ಸ್ತ್ರೀ ತನ್ನ ಅಸ್ತಿತ್ವವನ್ನು ಕಳೆದುಕೊಂಡಳು. ಸ್ತ್ರೀಯ ರಕ್ಷಣೆ ನೆಪದಲ್ಲಿ ಅನೇಕ ನಿಯಮಗಳು ಮತ್ತು ಬಂಧನಗಳನ್ನು ಅವಳ ಮೇಲೆ ಹಾಕಲಾಯಿತು. ಮೇಲ್ವರ್ಗದ ಸ್ತ್ರೀ ತನ್ನ ರಕ್ಷಣೆಯ ಹೊರೆ ಹೊತ್ತ ಪುರುಷನನ್ನು ಅಸಹಾಯಕತೆಯಿಂದ ಪ್ರಶ್ನಿಸದಾದಳು. ಆದರೆ ಆರ್ಥಿಕವಾಗಿ ಹಿಂದುಳಿದ ಕೆಳವರ್ಗದ ಸ್ತ್ರೀ, ಪುರುಷನೊಂದಿಗೆ ದುಡಿದು ಆರ್ಥಿಕ, ಸಾಮಾಜಿಕ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಪಡೆದಳು. ಮುಕ್ತ ವಾತಾವರಣದಲ್ಲಿ ಬದುಕಿದ ಸ್ತ್ರೀ, ಸಾಹಿತ್ಯ ಸಂದರ್ಭದಲ್ಲಿ ತನ್ನ ಮನ ಬಿಚ್ಚಿ ಮಾತನಾಡಿದ್ದಾಳೆ. ಬಡತನದ ಬೇಗೆಯಲ್ಲಿ ಬೆಂದಾಗ, ಉಕ್ಕಿ ಬರುವ ಭಾವನೆಗಳಿಗೆಲ್ಲ ಭಾಷಾ ರೂಪವನ್ನು ಕೊಟ್ಟು ಸ್ಪಂದಿಸಿದ್ದಾಳೆ. ಶಾಂತವಾಗಿ ತನ್ನ ಸಂವೇದನೆಗಳನ್ನು ವ್ಯಕ್ತಪಡಿಸಿದ್ದಾಳೆ. ತನ್ನ ನೋವನ್ನು ತಾನೇ ಹಾಡಿಕೊಂಡಿದ್ದಾಳೆ.

ಸ್ತ್ರೀ ತನ್ನ ಜೀವನ ನಿರ್ವಹಣೆಯಲ್ಲಿ ಪುರುಷರಿಗಿಂತ ಹೆಚ್ಚು ಜವಾಬ್ದಾರಿಗಳನ್ನು ಹೊತ್ತವಳು. ದುಡಿಮೆಯ ಜೊತೆಗೆ ಕುಟುಂಬದ ಸಂಪೂರ್ಣ ಜವಾಬ್ದಾರಿ ಅವಳ ಮೇಲಿರುತ್ತದೆ. ಪುರುಷರಂತೆ ಏಕಮುಖ ಜೀವನ ಅವಳದಲ್ಲ. ಬಾಲ್ಯ, ಯೌವನ, ಮುಪ್ಪಿನಂತಹ ಜೀವನದ ತಿರುವುಗಳಲ್ಲಿ ತಾನು ಅನುಭವಿಸಿದ ಸುಖ–ದುಃಖ, ನೋವು–ನಲಿವು ಮತ್ತು ಕುಟುಂಬ ಹಾಗೂ ಸಮಾಜ ತನ್ನನ್ನು ನಡೆಸಿಕೊಂಡ ರೀತಿ–ರಿವಾಜುಗಳನ್ನೆಲ್ಲ ಶಾಂತವಾಗಿ ವ್ಯಕ್ತಪಡಿಸಿದ್ದಾಳೆ. ಸ್ತ್ರೀಯು ಬದುಕನ್ನೆಲ್ಲ ಭಾವನೆಗಳಲ್ಲೇ ಕಳೆದವಳಲ್ಲ ಬದುಕನ್ನು ಅರ್ಥೈಸಿಕೊಂಡು ನಂಬಿಕೆಯಿಂದ ನಡೆದಿದ್ದಾಳೆ. ದುಡಿಮೆಯನ್ನು ಬದುಕಾಗಿ ಪಡೆದ ಆಕೆ ಕಾಯಕದೊಂದಿಗೆ ಕಾವ್ಯವನ್ನು ಕಟ್ಟಿದ್ದಾಳೆ. ಜನಪದದಲ್ಲಿ ಹೆಣ್ಣು ತಾನು ಅನುಭವಿಸಿದ ನೋವು ಯಾತನೆಗಳೆಲ್ಲವೂ ಕೂಡ ಆ ಸಮಾಜದ ಚೌಕಟ್ಟಿನೊಳಗೇ ಇರುವಂತದ್ದು. ಪುರುಷಪ್ರಧಾನವಾದ ಈ ಸಮಾಜದಲ್ಲಿ ಯಾವುದೇ ಭೇದವಿಲ್ಲದೆ ನೋವನ್ನು ನುಂಗಿಕೊಂಡು ಬಾಳುವೆ ನಡೆಸುತ್ತಾ ಬಂದಿದ್ದಾಳೆ. ಮದುವೆಯಾದ ಹೆಣ್ಣು ಗಂಡನ ಮನೆಗೆ ಹೋದಾಗ, ಮಕ್ಕಳಾಗಲಿಲ್ಲವೆಂದು ಗಂಡನಿಂದ ತಿರಸ್ಕೃತಳಾಗಿ, ಆ ಸಂದರ್ಭದಲ್ಲಿ ತವರ ಮನೆಗೂ ಬೇಡವಾಗಿ, ನಾದಿನಿ–ಅತ್ತಿಗೆಯರಿಂದ, ಅಣ್ಣ–ತಮ್ಮಂದಿರಿಂದ ನೋವನ್ನು ಅನುಭವಿಸುತ್ತಾ, ಸಮಾಜವು ರೂಪಿಸಿದ ಅನಿಷ್ಟ ಪದ್ಧತಿಗಳಿಗೆ ತನ್ನನ್ನು

ಅರ್ಪಿಸಿಕೊಂಡು ಒಂದಲ್ಲಾ ಒಂದು ರೀತಿಯಲ್ಲಿ ನೋವನ್ನು ಅನುಭವಿಸುತ್ತಾ ಬಂದಿದ್ದಾಳೆ. ಅವಳು ಅನುಭವಿಸಿದ ಈ ಯಾತನೆಗಳೆಲ್ಲವನ್ನು ಅವಳೇ ಸ್ವತಃ ರಚಿಸಿದ ಜನಪದ ಕಥನಕಾವ್ಯಗಳಾದ ಕಥನಗೀತೆ, ಲಾವಣಿ, ಖಂಡಕಾವ್ಯ, ಮಹಾಕಾವ್ಯಗಳಲ್ಲಿ ಹಾಡುವುದರ ಮುಖಾಂತರ ತೋರ್ಪಡಿಸಿಕೊಂಡಿದ್ದಾಳೆ. ಅವಳ ಆ ಕಥನಗಳಲ್ಲಿ ನಲಿವಿದೆ, ನೋವಿದೆ ಮತ್ತು ಅನ್ಯಾಯವಾದಾಗ ಪ್ರತಿಭಟಿಸುವ ಚಾಣಾಕ್ಷತೆಯೂ ಇದೆ.

ಜಾನಪದ ಸಾಹಿತ್ಯದಲ್ಲಿ ದಾಖಲೆಗೊಂಡಂತೆ ಸ್ತ್ರೀಗೆ ಸಂಬಂಧಿಸಿದ ಎರಡು ಕುಟುಂಬಗಳೆಂದರೆ ಅಪ್ಪನ ಮನೆ ಹಾಗೂ ಗಂಡನ ಮನೆ. ಮದುವೆಯ ನಂತರ ಒಂದು ಕುಟುಂಬದಿಂದ ಇನ್ನೊಂದು ಕುಟುಂಬಕ್ಕೆ ಹೋಗಿ ತನ್ನ ರಕ್ತ ಸಂಬಂಧಗಳನ್ನು ಮರೆತು, ಗಂಡನ ರಕ್ತ ಸಂಬಂಧಗಳೊಂದಿಗೆ ಸಂಬಂಧ ಬೆಳೆಸಿಕೊಂಡು ತನ್ನ ಜೀವನವನ್ನು ಪೂರ್ಣಗೊಳಿಸಿಕೊಳ್ಳುತ್ತಾಳೆ. ಅವಿಭಕ್ತಕುಟುಂಬ ವ್ಯವಸ್ಥೆಯಿರುವ ಈ ಎರಡು ಕುಟುಂಬಗಳಲ್ಲೂ ಸಾಮಾನ್ಯವಾಗಿ ಗಂಡು ಮನೆಯ ಹಿರಿತನದಲ್ಲಿರುತ್ತಾನೆ. ಸ್ತ್ರೀ ತವರಿನಲ್ಲಿ ಮಗಳಾಗಿ, ತಂಗಿಯಾಗಿ, ಅಕ್ಕನಾಗಿ, ಅತ್ತಿಗೆಯಾಗಿ ಬೆಳೆದವಳು. ಗಂಡನ ಮನೆಯಲ್ಲಿ ಹೆಂಡತಿಯಾಗಿ, ಸೊಸೆಯಾಗಿ, ಅತ್ತಿಗೆಯಾಗಿ, ತಾಯಿಯಾಗಿ ತನ್ನ ಜೀವನಾವರ್ತದ ಒಂದು ಚಕ್ರವನ್ನು ಎರಡು ಕುಟುಂಬಗಳಲ್ಲಿ ಮುಗಿಸುತ್ತಾಳೆ. ಆಕೆ ಹುಟ್ಟಿದಕೂಡಲೇ 'ಪರರ ಮನೆಯ ಸಿರಿದೇವಿ'ಯಾಗುತ್ತಾಳೆ. ಮದುವೆ ಮಾಡಿಕೊಟ್ಟಕೂಡಲೆ ತವರು ಮನೆಗೆ 'ಎರವು' ಆಗುತ್ತಾಳೆ.

**'ಅತ್ತೆಯ ಮನೆಯಲ್ಲಿ ಮುತ್ತಾಗಿರಬೇಕು**
**ಹೊತ್ತಾಗಿ ನೀಡಿದರೂ ಉಣಬೇಕು**
**ತವರವರ ಉತ್ತಮರ ಹೆಸರು ತರಬೇಕು'**

ಇಲ್ಲಿ ಮಗಳಿಗೆ ಹೇಳುವ ಈ ಬುದ್ಧಿ ಮಾತುಗಳು ಪೂರ್ವಾಶ್ರಮದ ಅನುಭವದಿಂದ ಹಾಗೂ ಸುತ್ತಮುತ್ತ ಸಮಾಜದಲ್ಲಿನ ಅತ್ತೆಯಂದಿರ ನಡವಳಿಕೆಯನ್ನು ಕಂಡು ಹುಟ್ಟಿದ ಅಭಿವ್ಯಕ್ತಿಯಾಗಿದೆ. ಅತ್ತೆಯಂದಿರ ಈ ರೀತಿಯ ವರ್ತನೆಗೆ ಕಾರಣ ಸಮಾಜದ ವ್ಯವಸ್ಥೆ ಮತ್ತು ಮಹಿಳೆಯರನ್ನು ಸಮಾಜದಲ್ಲಿ ನೋಡಿಕೊಳ್ಳುವ ರೀತಿ. ಕುಟುಂಬದ ಗಂಡು, ಹೆಣ್ಣು ಮತ್ತು ಹೊರಗಿನಿಂದ ಬಂದ ಸೊಸೆ ಎಲ್ಲರೂ ಸಮಾನರು. ಸೊಸೆ ಹೆದರಿ ನಡೆಯಬೇಕಾಗಿಲ್ಲ ಎಂಬ ಭಾವನೆಯನ್ನು ನಮ್ಮ ಕುಟುಂಬ ವ್ಯವಸ್ಥೆ ಬೆಳೆಸಿದ್ದರೆ, ಮಡಕೆಯಲ್ಲಿದ್ದ ಹುಳಿಯನ್ನ ಕುಟುಂಬದ ಎಲ್ಲರಿಗೂ ಹಂಚಿ ಹೋಗುತ್ತಿತ್ತು, ಇಲ್ಲವೆ ಹೊರಗೆ ಚೆಲ್ಲಲ್ಪಡುತ್ತಿತ್ತು. ಮಡಕೆಯಲ್ಲಿ ತುಸು ಅನ್ನ ಇದ್ದಾಗ ಎಲ್ಲರೂ ಉಂಡು ತೇಗಿ ಸೊಸೆಯೊಬ್ಬಳು ಅರೆಹೊಟ್ಟೆಯಲ್ಲಿರುವ ಪರಿಸ್ಥಿತಿ ಬರುತ್ತಿರಲಿಲ್ಲ. ವ್ಯವಸ್ಥೆಯ ಅವ್ಯವಸ್ಥೆಯಿಂದಾಗಿ ಸೊಸೆ ಅರೆಹೊಟ್ಟೆ ಉಣ್ಣುವ, ಹುಳಿಗಂಜಿ ಉಣ್ಣುವ, ಅಗಳಿಲ್ಲದೆ ತಿಳಿ ಕುಡಿಯುವ ಪರಿಸ್ಥಿತಿ ಬಂದಿದೆಯಾದರೂ

ಅದನ್ನು ಅವಳು ಬಾಯಿಬಿಟ್ಟು ಹೇಳುವಂತಿಲ್ಲ.

**‘ನಮ್ಮತ್ತೆ ಒಳ್ಳೆವು ನಮ್ಮಾವ ಒಳ್ಳೆವ**
**ಚಿಪ್ಪಾ ನಮಗೋಳು ಹೊಯ್ಕಂದೇವರೆ**
**ಆಚಾರಿಗೋಳು ಅರಗಲಿ’**

ಸಣ್ಣಚಿಪ್ಪು ಹಿಡಿದು ಅತ್ತೆ ಇನ್ನಷ್ಟು ಬಡಿಸಲಿ ಎಂದು ಕಾಯುವ ಸೊಸೆ, ಅನ್ನದ ಬಟ್ಟಲ ಮುಂದಿನ ಈ ಇಬ್ಬರು ಸ್ತ್ರೀಯರ ಈ ಗೋಳಿಗೆ ಕಾರಣ ವ್ಯವಸ್ಥೆ. ಈ ವ್ಯವಸ್ಥಿತ ಸಮಾಜದಲ್ಲಿ ಗಂಡನ ಮನೆ ಸ್ತ್ರೀಯ ಹಕ್ಕಿನ ಮನೆಯಲ್ಲ. ಒಂದು ಸಣ್ಣ ಕಾರಣಕ್ಕಾಗಿ ಅತ್ತೆಯಾಗಲಿ, ಗಂಡನಾಗಲಿ ಅವಳನ್ನು ಮನೆಯಿಂದ ಹೊರ ಹಾಕಬಹುದು. ಇದಕ್ಕೆ ಉತ್ತರೆಯ ಕಥೆಯನ್ನು ನಿದರ್ಶನವನ್ನಾಗಿ ಕಾಣಬಹುದು.

ಜನಪದ ಸಾಹಿತ್ಯದಲ್ಲಿ ದಿಟ್ಟ ಹೆಣ್ಣೆಂದು ಪ್ರಸಿದ್ಧಳಾದ ಉತ್ತರದೇವಿ ಬಡವರ ಮಗಳಲ್ಲ. ಹೂಡುವ ಎತ್ತ, ಹಿಂಡುವ ಕಪಿಲೆಗಳು, ಉಂಬುವ ಹರಿವಾಣ, ಕೈ ತೊಳೆಯಲು ತಂಬಿಗೆ, ಗಿಡಗಳಿಗೆ ನೀರು ಹಾಕಲು ಕೊಡ, ಹೀಗೆ ಸಂಪತ್ತಿನ ರಾಶಿಯನ್ನೇ ಹೊತ್ತುಕೊಂಡು ಗಂಡನ ಮನೆಗೆ ಬಂದಿದ್ದಳು ಉತ್ತರೆ. ದೊಡ್ಡವರ ಮಗಳೆಂದು, ರಾಶಿ ಬಳುವಳಿ ತಂದಳೆಂದು ಕುಳಿತು ಉಂಡವಳಲ್ಲ. ನಿಂಬಿಯ ಬನ, ಕಂಚಿಯ ಬನ, ಸಂಪಿಗೆಯ ಬನ, ಸೇವಂತಿಗೆಯ ಬನವನ್ನು ನೀರು ಹಾಕಿ ಸಲಹುತ್ತಿದ್ದಳು. ಆದರೆ ಅತ್ತೆ ಸೊಸೆಯ ಶೀಲವನ್ನು ಶಂಕಿಸಿದಳು. ಶೀಲವತಿಯಾಗಿ ಬಾಳಬೇಕೆಂದು ಬಂದವಳಿಗೆ, ಹೆಣ್ಣಿಗೆ ಶೀಲವೇ ಮೇಲೆಂದು ಸಮಾಜ ನಂಬಿಸಿದ ಮಾತನ್ನು ನಂಬಿ ಬಾಳಿದವಳಿಗೆ ಅತ್ತೆಯ ಶಂಕೆ ಸಹಿಸದಾಯಿತು.

**‘ನೀರಿಗೆ ಹೋದ ಸೊಸಿಯೇ ಇಟ್ಹೊತ್ತು ಹೆಂಗಾಯ್ತು**
**ಯಾರಲ್ಲಿ ನಿನ್ನ ತಡದೀರು’**
**ಎಂದು ಅತ್ತೆ ಕೇಳುವ ಪ್ರಶ್ನೆಗೆ ಉತ್ತರೆ ಅಂಜದೆ ಉತ್ತರ ಕೊಡುವಳು.**
**‘ನಿಮ್ಮಂಗಿರುವಾಗ ನೀವೇ ನೀರಿಗೆ ಹೋಗುವಾಗ**
**ನಿಮ್ಮ ಯಾರಲ್ಲಿ ತಡೆದೀರು ಅತ್ತೆಯಮ್ಮ**
**ಗಿಣಿಮಿಂದು ನೀರಕಣಕಿತ್ತೆ’**
**ಉತ್ತರೆಯ ಮಾತಿಗೆ ತೃಪ್ತಳಾಗದ ಅತ್ತೆ ತನ್ನ ಮಗನಿಗೆ**
**‘ಮುರಿದ ಚಿನ್ನ ಅಕ್ಕಸಾಲಿಗೆ ಕಳಿಸು**
**ಸೊಕ್ಕಿದ ಹೆಣ್ಣನ್ನು ತವರಿಗೆ ಕಳಿಸು**
**ಬಿಟ್ಟು ಬಿಡವಳ ತವರಿಗೆ’**

ಎಂದು ಮಗನಿಗೆ ಆಜ್ಞೆ ಮಾಡಿದಳು. ಉತ್ತರೆ ಘರ್ಷಣೆಗೆ ಇಳಿದರೂ ಅವಳು ಗೆಲ್ಲಲಾರಳು.

‘ಬಿಟ್ಟು ಬಿಡುವುದಕ್ಕೆ ಎತ್ತು ಕತ್ತೆಯಲ್ಲ’ ಎಂದು ಮಗ ಪತ್ನಿಯ ಪರವಾಗಿ ಹೇಳಿದರೂ, ಆಕೆ ಮಗನಿಗೆ ಮರುಮದುವೆ ಮಾಡಿಸುವೆನೆಂದು ಧೈರ್ಯ ಹೇಳಿ

ಅವನ ಬಾಯಿ ಮುಚ್ಚಿಸುತ್ತಾಳೆ. ಸೊಸೆಯ ಶೀಲವನ್ನು ಕಾಯುವ ಕಾವಲುಗಾರಳಾದ ಅತ್ತೆ ಇಲ್ಲಿ ಸೊಸೆಯ ನಡತೆಯನ್ನು ತಪ್ಪಾಗಿ ಗ್ರಹಿಸಿದ್ದಾಳೆ. ಉತ್ತರೆ ಗಂಡನನ್ನು ಬಿಟ್ಟು ತನ್ನ ಬಳುವಳಿ ಸಮೇತ ತವರಿಗೆ ಬರುವಾಗ, ಅವಳನ್ನು ತಡೆದು ನಿಲ್ಲಿಸಿದಂತಹ ಗೋವೆನಾಡರಸು, ಗುತ್ತಿನಾಡರಸುಗಳನ್ನು ಧಿಕ್ಕರಿಸುತ್ತಾಳೆ. ಅತ್ತೆಯ ಮನೆಯಲ್ಲಿ ಬಾಳಲಾರದೆ ಬಂದ ಉತ್ತರೆಗೆ ತವರುಮನೆ ಹಂಗಿನದಾಗುತ್ತದೆ. 'ಎರವು' ತನದ ಹಕ್ಕಿನಿಂದಲೂ ಅವಳು ವಂಚಿತಳಾಗುತ್ತಾಳೆ. ತವರಿನಲ್ಲಿ ತನಗೆ ಜಾಗ ಸಿಗಬಹುದೆಂಬ ಸಮೀಪದ ಆಸೆಯೂ ದೂರವಾಗುತ್ತದೆ.

**'ಬಾಳುವೆ ಮಾಡಿದರೆ ಬಾ ತಂಗೆ ಎಂಬರು**
**ಬಾಳುವೆಗೆಟ್ಟು ಮತಿಗೆಟ್ಟು ತಿರುಗಿದರೆ**
**ಹೆತ್ತವರ ಕುಲಕೆ ಹಗೆಯಾದೆ'**

'ತವರು ಮನೆಯು ಏಸು ದಿನವಿದ್ರು ನೆರೆಮನೆಯು' ಬೈದಂತ ಬೈಗುಳ ಬೆನ್ನ ಹಿಡಿದು ಬಾರವ್ವ ಬೈಗುಳ ಮಲ್ಲಿಗೆ ಮಾಡಿ ಮುಡಿ ಹೋಗು ಎಂದು ಬುದ್ಧಿ ಹೇಳಿ ತಿರುಗಿ ಗಂಡನ ಮನೆಗೆ ಹೋಗುವಂತೆ ಸೂಚಿಸಿದಳು ತಾಯಿ. ಉತ್ತರ ಕೊಟ್ಟ ಉತ್ತರೆಗೆ ತವರಿನ ಬಾಗಿಲೂ ಮುಚ್ಚಿತು. ಉತ್ತರೆ ತಿರುಗಿ ಗಂಡನ ಮನೆಗೆ ಹೋಗಲಿಲ್ಲ. ತಾವರೆಯ ಎಲೆಯ ಮೇಲೆ ಕುಳಿತು ತಾಯಿ ಗಂಗಮ್ಮ ಕರಕೊಳ್ಳೆ ಎಂದಳು. ಗಂಗಮ್ಮ ಉತ್ತರೆಯನ್ನು ತನ್ನ ಒಡಲಲ್ಲಿ ಸೇರಿಸಿಕೊಂಡಳು. ಉತ್ತರೆ, ಉತ್ತರಾ ಮಳೆಯಾಗಿ ನಾಡ ಮೇಲೆ ಸುರಿದಳು.

**'ಹೆಣ್ಣಿನ ಕಾಯವ ಮಣ್ಣು ಮಾಡಲೇ ಬೇಕು**
**ಸುಣ್ಣದ ಚಿಪ್ಪಾಗಿ ಸುಡಬೇಕು ಈಜಲ್ಮ**
**ಮಣ್ಣು ಮಾಡಿ ಮರ್ತ್ಯ ಬಿಡಬೇಕು'**

ಆ ದಾರಿಯನ್ನೇ ಉತ್ತರೆಯೂ ಅನುಸರಿಸಿದಳು. ಗಂಡನ ಮನೆ, ತವರು ಮನೆಗಳಿಗೆ ಬೇಡವಾದ ಇವಳು ದೇವತೆಯಾದಳು. ಯಾಕೆಂದರೆ ಅತ್ತೆಯಿಂದ ಅಪವಾದಕ್ಕೆ ಗುರಿಯಾದರೂ ತನ್ನ ಪಾತಿವ್ರತ್ಯವನ್ನು ಕಾದುಕೊಂಡದ್ದು ಉತ್ತರದೇವಿಯ ಒಳ್ಳೆಯತನವೆಂಬುದನ್ನು ಗುರುತಿಸಬಹುದಾಗಿದೆ.

ಜನಪದ ಸಾಹಿತ್ಯದಲ್ಲಿ ಸ್ತ್ರೀ ಮಕ್ಕಳನ್ನು ಪಡೆಯುವುದರಲ್ಲಿಯೂ ಕೂಡ ವಿಶೇಷತೆ ಇತ್ತು. ಗಂಡು ಮಕ್ಕಳಿಗೆ ಹೆಚ್ಚಿನ ಆದ್ಯತೆ. ಹೆಣ್ಣು ಎಂದಿದ್ದರೂ ಕೊಟ್ಟ ಮನೆಗೆ ಹೋಗುವಳು, ಅಲ್ಲದೆ ಗಂಡಿನಷ್ಟು ಶ್ರೇಷ್ಠಳಲ್ಲ. ಆದರೆ, ಗಂಡು ಕೊನೆಯತನಕ ಮನೆಯಲ್ಲಿದ್ದು, ತಂದೆ ತಾಯಿಗಳ ಪೋಷಣೆ ಮಾಡುವನಲ್ಲದೆ ವಂಶೋದ್ಧಾರಕನು ಆಗುತ್ತಾನೆ. ತಾನು ತೀರಿಕೊಂಡ ನಂತರ ತನ್ನ ಶವಸಂಸ್ಕಾರವನ್ನು ಮಾಡುವ ಹಕ್ಕು ಗಂಡಿಗೆ ಸೀಮಿತ. ತಮ್ಮ ಮನೆತನದ ಗೌರವವನ್ನು, ಧರ್ಮವನ್ನು ಚಾಚೂ ತಪ್ಪದೆ ನಡೆಸುವವ ಮಗ ಮಾತ್ರ ಎಂಬ ನಂಬಿಕೆ.

**‘ಹೆಣ್ಣು ಹುಟ್ಟಿದ ಮನಿ ಹೆಗ್ಗಣತ್ತಿದ್ದಾಂಗ**
**ಗಂಡನ ಮಗ ಗಜಭೀಮ ಹುಟ್ಟಿದರೆ**
**ಚಿಲಕಚಿತ್ತಾರ ನಗತಾವ’**

ಇಲ್ಲಿ ಗಂಡು ಮಗು ಗಜಭೀಮರಂತೆ ಕಂಡರೆ, ಹೆಣ್ಣು ಮಗು ಹೆಗ್ಗಣದಂತೆ ಕಂಡಿದ್ದಾಳೆ. ಗಂಡು ಹುಟ್ಟಿದರೆ ‘ಚಿಲಕಚಿತ್ತಾರ’ದಂತಹ ನಿರ್ಜೀವ ವಸ್ತುಗಳಿಗೂ ಜೀವಕಳೆ ಬಂದು ನಗುತ್ತವೆಯಂತೆ, ಜನಪದ ಮಹಿಳೆಗೆ ಹೆಣ್ಣು ಮಗು ಹೆಗ್ಗಣವಾಗಿ ಕಾಣಿಸಿಕೊಂಡಿದ್ದೊಂದು ಎಂಥ ವಿಪರ್ಯಾಸ. ಇದಕ್ಕೆ ಕಾರಣ ಪುರುಷನ ಇಷ್ಟದಂತೆಯೇ ಗಂಡು ಮಗುವನ್ನು ಪಡೆಯಬೇಕೆಂಬ ಹೆಬ್ಬಯಕೆ, ಹೆಣ್ಣು ಮಗುವನ್ನು ತಿರಸ್ಕರಿಸುವಂತೆ ಮಾಡಿರಬೇಕು. ಒಂದು ವೇಳೆ ಹೆಣ್ಣು ಮಗು ಜನಿಸಿದರೆ, ಅದನ್ನು ‘ರವಿ ಚಿನ್ನವಾಗಿ ಸ್ವೀಕರಿಸುವಳು’. ಹೆಣ್ಣು ಚಿಕ್ಕವಳಿರುವಾಗಲೇ ಅವಳಿಗೆ ಸಂಸಾರದಲ್ಲಿ ಯಾವ ರೀತಿ ನಡೆದುಕೊಳ್ಳಬೇಕು, ಹಿರಿಯರಿಗೆ ಹೇಗೆ ಗೌರವದಿಂದ ಮಾತನಾಡಬೇಕು ಎಂಬುದನ್ನು ತಾಯಿಯಾದವಳು ಅಥವಾ ಆ ಮನೆಯ ಹಿರಿಯ ಸದಸ್ಯರು ಅವಳಿಗೆ ಜೀವನ ಶಿಕ್ಷಣ ಕೊಡುವರು. ಅತಿಯಾದ ಆತ್ಮೀಯತೆಯಿಂದ ತಾಳ್ಮೆಗೆಟ್ಟಿರಬಾರದು, ಪುರುಷರ ಹತ್ತಿರ ಅತೀ ಸಮೀಪದಲ್ಲಿ ಕುಳಿತು ಮಾತನಾಡಬಾರದು, ಹೊರಗೆ ಅತಿಯಾಗಿ ತಿರುಗಾಡಬಾರದು, ಮನೆಯನ್ನು ಶುಚಿಯಾಗಿ ಇಟ್ಟುಕೊಳ್ಳಬೇಕು, ಹಿರಿಯರನ್ನು ಗೌರವದಿಂದ ಕಾಣಬೇಕು. ಈ ರೀತಿಯಾಗಿ ಹಲವಾರು ನಿಯಮದ ಕಡಿವಾಣ ಹಾಕಿ ಅವಳನ್ನು ಬೆಳೆಸುವರು. ಹೀಗಾಗಿ ಆ ಹೆಣ್ಣು ಮಗು ಮಗುವಾಗಿ ಬೆಳೆಯದೆ ಮಹಿಳೆಯಾಗಿಯೇ ಬೆಳೆಯುತ್ತಾಳೆ. ಚಿಕ್ಕವಳಿರುವಾಗಲೇ ಹಿರಿಯ ಅನುಭವಗಳನ್ನು ಹೊಂದುತ್ತಾ, ಮುಂಬರುವ ತನ್ನ ಭಾವಿ ಬದುಕಿಗೆ ಗಟ್ಟಿಯಾದ ತಳಹದಿಯನ್ನು ಕಂಡುಕೊಳ್ಳುತ್ತಾಳೆ.

ಇಂತಹ ಜನಪದ ಹೆಣ್ಣು ತನಗೊಬ್ಬಳು ಸವತಿ ಬಂದಾಗ ಅಸಹಾಯಕತೆಯಿಂದ ಮನದೊಳಗೆ ನರಳುತ್ತಾಳೆ. ಸಾವಿರ ಕೊಟ್ಟರೂ ಸವತಿ ಮನೆ ಬೇಡ ಎಂದು ನೊಂದು ನುಡಿಯುತ್ತಾಳೆ. ಆದರೆ ಈಗಾಗಲೇ ತವರು ಮನೆಯಿಂದ ತನ್ನ ಅಪ್ಪ-ಅಮ್ಮ ಹೇಳಿದಂತೆ, ಅತ್ತೆ ಮಾವರಿಗಂಜಿ ಸುತ್ತೆಳು ನೆರೆಗಂಜಿ ಮರು ಮಾತನಾಡದೆ ಬಾಳುವೆ ಮಾಡುತ್ತಾಳೆ. ಇಷ್ಟಲ್ಲದೆ ತವರಿಗೆ ಹೋದಾಗ ಅಣ್ಣನ ಹೆಂಡತಿ ಸುಣ್ಣದ ನೀರ ಒಲೆ ಮುಂದೆ ಇಟ್ಟುಕೊಂಡು ಎಮ್ಮಿ ಹಾಲೆಂದು ಬಡಿಸುತ್ತಾಳೆ. ಈ ಎಲ್ಲಾ ನೋವು ನುಂಗಿದ ಗರತಿಗೆ ಗಂಡನ ಮನೆಯಲ್ಲಿ ನಾದಿನಿಯ ಕಾಟವು ತಪ್ಪುವುದಿಲ್ಲ. ಇಷ್ಟೆಲ್ಲಾ ಆದರೂ, ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯ ಜಲಜಲನೆ ಉದುರಮ್ಮ ಎಂದು ತನ್ನ ಸಂಗಾತಿಯಾದ ಬೀಸುವ ಕಲ್ಲಿನ ಜೊತೆ ತನ್ನ ಅಮ್ಮನನ್ನು ಗುರುತಿಸಿಕೊಂಡು ದುಃಖ ಮರೆಯುತ್ತಾಳೆ. ಈ ರಾಗಿಕಲ್ಲು ಅವಳಿಗೆ ಭಾಗ್ಯದ ಕಲ್ಲು ಆಗುತ್ತದೆ. ತಾನು ಹೆಣ್ಣಾಗಿ ಹುಟ್ಟಿದ್ದಕ್ಕೆ ಒಮ್ಮೊಮ್ಮೆ 'ಮಣ್ಣಾಗಿ ಹುಟ್ಟಿದರೆ, ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿದರೆ ಪುಣ್ಯವಂತರಿಗೆ ನೆರಳಾಗುತ್ತಿದ್ದೆ’ ಎಂದು ಆಸೆ ಪಡುತ್ತಾಳೆ.

ಸ್ತ್ರೀ ಸಂವೇದನೆಗಳನ್ನೊಳಗೊಂಡ ಕಥನಗೀತೆಗಳೆಲ್ಲವೂ ಮಾಂಗಲ್ಯಭಾಗ್ಯ, ಸಕಲಭಾಗ್ಯ, ಸಚ್ಚಾರಿತ್ರ್ಯ ಮತ್ತು ಶೀಲಗಳೇ ಹೆಣ್ಣಿನ ಆದರ್ಶ ಎಂಬುದನ್ನು ನಿರೂಪಿಸುವ ಕಥಾ ನಾಯಕಿಯರನ್ನು ಕುರಿತಂತವು. ಕನ್ನಡದಲ್ಲಿ ಬಹಳ ಪ್ರಸಿದ್ಧವಾದ ಉತ್ತರದೇವಿಯ ಹಾಡಿನಲ್ಲಿ ಅತ್ತೆಯ ಸರಳ ಆರೋಪಕ್ಕೆ ಗುರಿಯಾಗಿ, ಪ್ರೀತಿಸುವ ಗಂಡನಿಂದಲೂ, ತವರಿನ ಆಶ್ರಯದಿಂದಲೂ ವಂಚಿತಳಾದ ಉತ್ತರದೇವಿ ಎಂಬ ಸಾಧ್ವಿಯ ಕುರಿತಂತ ಕಥೆಯಿದೆ. 'ಗುಣಸಾಗರಿ' ಎಂಬ ಕಥನಗೀತೆಯ ನಾಯಕಿ ಗುಣಸಾಗರಿಯೂ ನಡತೆಯ ಮೇಲಿನ ಆರೋಪಕ್ಕೆ ಗುರಿಯಾಗಿ ದಾರುಣವಾದ ಕಷ್ಟ ನಷ್ಟಗಳನ್ನು ಅನುಭವಿಸಿದ ಕಥೆ. 'ಕಾಡಸಿದ್ಧಮ್ಮನ ಗೀತೆ' ಸವತಿಯ ಕುತಂತ್ರದಿಂದಾಗಿ ಕಷ್ಟ ನಷ್ಟಗಳನ್ನು ಅನುಭವಿಸಿದ ಹೆಣ್ಣಿನ ಕಥೆಯಾದರೆ ಮಹಾಸತಿ ತಾಡಿನಾಗಮ್ಮ, ವೀರತಿಮ್ಮವ್ವ, ಕಾಟವ್ವ, ಮೊದಲಾದವರೆಲ್ಲರೂ ಗಂಡನು ಮಡಿದಾಗ ತಾವೂ ಅವನೊಂದಿಗೆ ಚಿತೆ ಏರಿ ಮಹಾಸತಿಯರೆನಿಸಿಕೊಂಡ ಸಾಧ್ವಿಯರ ಕಥೆಗಳು. ಕಾಮಿಸಿದ ವ್ಯಕ್ತಿಯಿಂದ ಗಂಡನ ಕೊಲೆಯಾದಾಗ ಆ ವ್ಯಕ್ತಿಯನ್ನು ಕೊಂದು ಗಂಡನೊಡನೆ ಚಿತೆ ಏರಿದವಳು ಚಿಕ್ಕೋಳು ಹಿರಿದಿಮ್ಮಿ. ಕೆರೆಗೆ ನೀರು ಬರಲೆಂದು ಅಥವಾ ಕಟ್ಟಿಸಿದ ಕೋಟೆ ನಿಲ್ಲಲೆಂದು ಬಲಿಯಾದ ಸ್ತ್ರೀಯರೆಂದರೆ ಭಾಗೀರಥಿ, ಧರಣೆಮ್ಮ, ಹುಳಿಯಾರು ಕೆಂಚಮ್ಮ, ಮದಗದ ಕೆಂಚಮ್ಮ ಮೊದಲಾದವರು. ಬಂಜೆ ಎಂಬ ಕಾರಣಕ್ಕಾಗಿ ಅನೇಕ ರೀತಿಯ ಅವಮಾನ ಮತ್ತು ಬಹಿಷ್ಕಾರಗಳನ್ನು ಅನುಭವಿಸಿದವಳು ಬಂಜೆ ಹೊನ್ನಮ್ಮ. ಎಳೆಯ ಶಿಶುವನ್ನು ಕಟ್ಟಿಕೊಂಡು ಸೊಪ್ಪಿಗೂ ಉಪ್ಪಿಗೂ ಗತಿಯಿಲ್ಲದೆ ಬಾಳಿದವಳು ಕುಂತಿ ಅಥವಾ ಕೊಂತಮ್ಮ. ಈ ರೀತಿಯಾಗಿ ಸ್ತ್ರೀ ಜೀವನದ ಮೌಲ್ಯಗಳನ್ನು ಪ್ರತಿಪಾದಿಸುವ ಇಂತಹ ಸಾಧ್ವಿಯರನ್ನು ಕುರಿತ ಹಾಡುಗಳು ಬೇರೆ ಬೇರೆ ಪಾಠಾಂತರ ಮತ್ತು ಶೀರ್ಷಿಕೆಗಳೊಂದಿಗೆ ನಮ್ಮ ನಾಡಿನ ಸ್ತ್ರೀಯರಲ್ಲಿ ಬಹಳ ಪ್ರಚಲಿತವಾಗಿವೆ. ಸ್ತ್ರೀ ಜೀವನದ ಆದರ್ಶಗಳನ್ನು ಈ ಸ್ತ್ರೀಯರು ಒಬ್ಬರಿಗಿಂತ ಒಬ್ಬರು ವಿಶಿಷ್ಟವಾಗಿ ಪ್ರತಿಪಾದಿಸಿದ್ದಾರೆ.

ಅಂತಹ ಕಥೆಗಳಲ್ಲಿ 'ಕೆರೆಗೆ ಹಾರ'ದ ಭಾಗೀರಥಿ ತನ್ನ ಮಾವನಾದ ಕಲ್ಲನಕೇರಿ ಮಲ್ಲನಗೌಡ ಕಟ್ಟಿಸಿದ ಕೆರೆ ನಿಲ್ಲಲೆಂದು ಕೆರೆಗೆ ಹಾರವಾಗುತ್ತಾಳೆ. ತನ್ನನ್ನು ಕೆರೆಗೆ ಹಾರ ಕೊಡುತ್ತಾರೆ ಎಂದು ತಿಳಿದರೂ, ಅಪಾರವಾದ ಶೋಕವನ್ನು ಅನುಭವಿಸಿದರೂ, ಆ ವಿಷಯವನ್ನು ಯಾರ ಎದುರಿಗೂ ಹೇಳಿಕೊಳ್ಳದ ಅಪೂರ್ವವಾದ ಸಂಯಮವನ್ನು ತೋರಿಸುವುದರ ಮುಖಾಂತರ ಸ್ತ್ರೀಯರಿಗೆ ಆದರ್ಶಪ್ರಾಯಳಾಗುತ್ತಾಳೆ. ಅವಳು ತನ್ನ ಒಡಲಾಳದ ನೋವನ್ನು ಹೇಳಿಕೊಳ್ಳುವುದಕ್ಕಾಗಿಯೇ ತವರಿಗೆ ಹೋಗುತ್ತಾಳೆ. ಅವಳ ತಂದೆ ತಾಯಿಯರು,

**'ಎಂದಿಲ್ಲದ ಭಾಗೀರಥಿ ಇಂದ್ಯಾಕ ಬಂದೆವ್ವ**
**ಬಾಡಿದ ಮರ್ಯಾಕ ಕಣ್ಣಾಗ ಮರ್ಯಾಕ'**

ಎಂದು ಕೇಳಿದಾಗ ನಿಜಸಂಗತಿಯನ್ನು ಮರೆಮಾಚಿ 'ನಮ್ಮಾವ ನಮ್ಮತ್ತೆ ಬ್ಯಾರೆ ಇಡತಾರಂತೆ' ಎಂದು ಹೇಳುತ್ತಾಳೆ. ಯಾರ ಎದುರಿಗೂ ಹೇಳದೆ ಇರುವಂತ ಸಂಗತಿಯನ್ನು ತನ್ನ ಗೆಳತಿಯ ಹತ್ತಿರ ಹೇಳಿಕೊಳ್ಳುವಾಗ, 'ಅಂಜಿಕೇಳಲು ಗೆಳತಿ ಅಳುಕಿ ಹೇಳಲೆ ಗೆಳತಿ' ಎಂದು ಹಿಂಜರಿಯುತ್ತಲೇ 'ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡತಾರಂತ' ಎಂದು ಹೇಳಿದಾಗ 'ಕೊಟ್ಟಾರೆ ಕೊಡಲೇಳು ಇಟ್ಹಾಂಗ ಇರಬೇಕು' ಎಂದು ಗೆಳತಿ ಹೇಳಿದ ಕೂಡಲೇ ಮರುಮಾತಾಡದೆ ಬಂದು ಬಿಡುತ್ತಾಳೆ. ಅತ್ತೆಯ ಮನೆಯಲ್ಲಿ ದುಃಖ ಉಕ್ಕುಕ್ಕಿ ಬಂದು ಕಣ್ಣೀರು ತುಂಬಿ ಬಂದಾಗ, ಅತ್ತೆ ಕೇಳಿದ ಪ್ರಶ್ನೆಗೆ ಉತ್ತರವಾಗಿ, 'ಬ್ಯಾಳ್ಯಾಗಿನ ಹಳ್ಳು ಬಂದು ಕಣ್ಣಾಗೆರೆಚಿದವು ಮಾವಾ, ಅಕ್ಯಾಗಿನ ಹಳ್ಳೊಂದು ಕಣ್ಣಾಗ ಬಿತ್ತ' ಎಂದು ಈ ರೀತಿ ಹೇಳಿ ನಿಜಸಂಗತಿಯನ್ನು ಮರೆಮಾಚುತ್ತಾಳೆ. ಭಾಗೀರಥಿಯು ತನಗೆ ಬಂದ ದುಃಖವನ್ನು ಸಹಿಸಿಕೊಳ್ಳುವುದರಲ್ಲಿ ತನ್ನ ಗಟ್ಟಿತನವನ್ನು ತೋರ್ಪಡಿಸಿ, ಕೋಟೆ ನಿಲ್ಲಲೆಂದು ಕೋಟೆಗೆ ಬಲಿಯಾದ ಧರಣೆಯಮ್ಮ ಬಲಿಯಾಗುವುದಕ್ಕೆ ಮುಂಚೆ ಗಂಡನ ಹಿತಕ್ಕಾಗಿ ಆತನಿಗೆ ತನ್ನ ತಂಗಿಯನ್ನು ಮದುವೆ ಮಾಡಲು ನಿರ್ಧರಿಸುತ್ತಾಳೆ.

**'ಕಂದನೆತ್ತುವರಿಲ್ಲ ಕಂದಗಳ ತೂಗುವರಿಲ್ಲ**
**ಆರಂಭದಾ ಬದುಕು ಬಲುದೊಡ್ಡದು ತಾಯಿ**
**ರಾಯರು ಪರದೇಶಿ ಆದಾರು**
**ತಾಯಿ ತಂದೆ ಚಿಕ್ಕ ತಂಗೀನ ಕೊಡಬೇಕು'**

ಈ ರೀತಿಯಾಗಿ ತನ್ನ ತಾಯಿಯಿಂದ ಬಲಗೈ ಭಾಷೆ ತೆಗೆದುಕೊಳ್ಳುತ್ತಾಳೆ. ಇದೇರೀತಿ 'ಮದಗದ ಕೆಂಚಮ್ಮ'ನೂ ಸಹ ತಾನೂ ಕೆರೆಗೆ ಬಲಿಯಾದರೂ ಕೂಡ ತನ್ನ ಒಡಹುಟ್ಟಿದ ತಂಗಿಯನ್ನೇ ತನ್ನ ಪತಿರಾಯನಿಗೆ ಮದುವೆ ಮಾಡಿಸುವ ಔದಾರ್ಯವನ್ನು ಮೆರೆಯುತ್ತಾಳೆ.

ಸತಿ ಪದ್ಧತಿಯ ಆಚರಣೆಯಲ್ಲಿಯೂ ಇಂತಹದೇ ಕ್ರೌರ್ಯವನ್ನು ನಾವು ಗುರುತಿಸಬಹುದಾಗಿದೆ. ಈರೋಬಿ, ನಾಗವ್ವ, ವೀರ ತಿಮ್ಮವ್ವ, ಕಾಟವ್ವ, ಮಲ್ಲಣ್ಣದೇವಿ, ಮಹಾಸತಿ ಹಿರಿದಿಮ್ಮವ್ವ ಮುಂತಾದ ಕಥನಗೀತೆಗಳು ಕೊಂಡಕ್ಕೆ ಹಾರೀಕೆಂಡವಾಗಿ ಉರಿದು ಬೂದಿಯಾಗಿಸಿಕೊಂಡ ಎಳೆ ಹೆಣ್ಣು ಜೀವಗಳ ದುರಂತವನ್ನು ಚಿತ್ರಿಸುತ್ತವೆ. ಆದರೆ ಸತಿ ಹೋಗುವುದು ಪಾತಿವ್ರತ್ಯದ ಚರಮ ಸೀಮೆ ಎಂಬಂತೆ, ಅವಳು ಸತ್ತ ನಂತರ ಮಾಸ್ತಿ ದೇವತೆಯಾಗಿ ಜನರಿಂದ ಪೂಜಿಸಲ್ಪಡುವುದು ಇವೆಲ್ಲ ಅದನ್ನೊಂದು ಮೌಲ್ಯವಾಗಿಸಿದುದನ್ನು ಸಾರುತ್ತವೆ. ಹೀಗೆ, ಜನಪದ ಸಾಹಿತ್ಯದ ದೊಡ್ಡ ಭಾಗವೊಂದು ಪುರುಷನ ಪರಮಾಧಿಕಾರ ಸ್ಥಾಪನೆಗೆ ಬದ್ಧವಾಗಿರುವಂತೆ ಇದರ ಅರಿವಿದ್ದೋ ಇಲ್ಲದೆಯೋ ಮಹಿಳೆ ಆ ಎಲ್ಲ ಮೌಲ್ಯಗಳನ್ನು ಒಪ್ಪಿಕೊಂಡು ಅಧೀನತೆಯ ಬಾಳನ್ನು ಜೀವಿಸುತ್ತಿರುವುದನ್ನು ಕಾಣುತ್ತೇವೆ. ಆದರೆ ಕೆಲವೊಮ್ಮೆ ಮನಸ್ಸಾರೆ ಒಪ್ಪದೆ ತಣ್ಣನೆಯ

ಪ್ರತಿಭಟನೆಯ ಧ್ವನಿಯನ್ನು ಹೊರಡಿಸಿರುವುದನ್ನು ಕೂಡ ಕಾಣಬಹುದು.

'ಲೋಕಕಿಲ್ಲದ ಮಗಳ ಯಾಕೆತ್ತೆ ತಾಯಮ್ಮ ಲೋಕದ ಬಾಳು ನಮಗಿಲ್ಲ' ಎಂಬ ಮಾತಿನಲ್ಲಿ ಅಡಗಿರುವ ಅಂಥ ನೋವನ್ನು ನಾವು ಗುರುತಿಸಬಹುದಾಗಿದೆ. ಮಹಾಸತಿ 'ವೀರತಿಮ್ಮವ್ವ' ಕಥನ ಗೀತೆಯಲ್ಲಿ ಸತಿ ಹೋಗುವುದು ತಿಮ್ಮವ್ವನಿಗೆ ಅನಿವಾರ್ಯ. ಸಮಾಜದ ಈ ಬಿಗಿಹಿಡಿತವನ್ನು ಅವಳು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಆದರೆ, ತಾಯಿಯನ್ನು ಕಂಡ ಕೂಡಲೆ ದುಃಖ ಉಮ್ಮಳಿಸಿ ಬರುತ್ತದೆ. ಆಗ ಅವಳು ಹೆಣ್ಣಾಗಿ ಹುಟ್ಟಬಾರದಿತ್ತು ಎಂದೇ ಹಳಹಳಿಸುತ್ತಾಳೆ.

**'ಹೆಣ್ಣು ಮಗಳನ್ನು ಯಾಕೆಡದೆ ನನ್ನವ್ವ**
**ಎಣ್ಣೆಯಾಗಿ ಬತ್ತಿ ಉರಿದ್ದಂಗ: ಮಾನವರ**
**ಕಣ್ಣಾಗ ನಾನು ಉರಿದೇನ'**

ಅನೇಕರಿಗೆ ಹೆಣ್ಣು ಜನ್ಮಕ್ಕಿಂತ ಹಾದಿ ನಾಯಿಯ ಜನ್ಮವೇ ಕಡು ಲೇಸೆನ್ನಿಸಿದೆ. ವಾಸ್ತವ ಬದುಕಿನ ನೋವುಗಳೇ ಹೆಣ್ಣು, ಬದುಕನ್ನು ನಿರಾಕರಿಸುವಂತೆ ಮಾಡಿವೆ.

ಸತಿಪದ್ಧತಿಯ ಆಚರಣೆಯಲ್ಲಿಯೂ ಕೂಡ ಎಲ್ಲಾ ಮಹಿಳೆಯು ಗಂಡನ ಶವದೊಂದಿಗೆ ಚಿತೆ ಏರುವುದನ್ನು ಒಪ್ಪುತ್ತಿರಲಿಲ್ಲವೆಂದು ತೋರುತ್ತದೆ. ಕೆಲವರಂತೂ ದೈತ್ಯಾಕಾರದಲ್ಲಿ ಕೊಂಡದ ಬೆಂಕಿ ಉರಿಯುತ್ತಿದ್ದುದನ್ನು ನೋಡಿಯೇ ಹೆದರಿ ಓಡಿ ಹೋಗಲು ಯತ್ನಿಸುತ್ತಿದ್ದರಂತೆ. 'ನಾಗವ್ವ' ಕಥನ ಗೀತೆಯಲ್ಲಿ ಅವಳ ಲಗ್ನ ನಿಶ್ಚಯವಾಗಿತ್ತು ಅಷ್ಟೇ ಮದುವೆಗಿಂತ ಮೊದಲೇ ಚಂದಯ್ಯ ಯುದ್ಧದಲ್ಲಿ ಸಾಯುತ್ತಾನೆ. ಅವಳನ್ನು ಕೊಂಡಕ್ಕೆ ಧಾರೆ ಎರೆದು ಕೊಡುತ್ತಾರೆ.

**'ತಿರಿದುಂಬ ಜೋಗಿಗೆ ನನ್ನ ಕೊಟ್ಟಿದ್ದರೆ**
**ತಿರಿದುಂಡು ನಾನು ಇರುತ್ತಿದ್ದೆ**
**ದಡ್ಡಗೇರೆಂಬೋದು ದೊಡ್ಡ ಪಟ್ಟಣವೆಂದು**
**ನನ್ನೀಗ ಕೊಂಡಾಕೆ ಧಾರೆ ಎರೆದವರೆ/ನನ್ನ ತವರವರು**
**ನನ್ನ ಕೊಟ್ಟಾರ ಮನೆಯು ಉರಿಯಾಲಿ ಬೇಯಾಲಿ'**

ಎಂದು ಅವಳು ಶಾಪ ಹಾಕುತ್ತಾಳೆ. ಸಾಯಲು ಹೊರಟ ಹೆಣ್ಣು ಶಾಪ ಹಾಕುತ್ತಾಳೆಂದರೆ, ಅವಳ ಅಂತರಂಗದ ನೋವು ಬದುಕಬೇಕೆಂಬ ಜೀವನ ಪ್ರೀತಿ ಅವಳಲ್ಲಿ ಅದೆಷ್ಟು ಗಾಢವಾಗಿತ್ತು ಎಂಬುದನ್ನು ನಾವು ಊಹಿಸಿಕೊಳ್ಳಬೇಕು. ಹೀಗೆ ಅಸಹಾಯಕತೆ, ಅಸಹನೆಗಳನ್ನು ಪ್ರಕಟಿಸಿದ ಹೆಣ್ಣುಗಳೆಷ್ಟೋ.

'ಜುಂಜಪ್ಪನ' ಕಾವ್ಯದಲ್ಲಿ ಚೆನ್ನಮ್ಮನ ಒಂದು ಪಾತ್ರವಿದೆ. ಅಲೆಮಾರಿ ಕೆಂಗುರಿ ಮಲ್ಲಪ್ಪ ಕಂಬಿಗೊಲ್ಲರ ಹೆಣ್ಣು ಚೆನ್ನಮ್ಮನನ್ನು ಮದುವೆಯಾಗುತ್ತಾನೆ. ಚೆನ್ನಮ್ಮ ಈಶ್ವರನನ್ನು ಬೇಡಿ ತನ್ನ ಬಂಜೆತನವನ್ನು ಹೋಗಲಾಡಿಸಿಕೊಳ್ಳುತ್ತಾಳೆ. ಜುಂಜಪ್ಪ ಹುಟ್ಟುತ್ತಾನೆ. ಮುಂದೆ ಬಡತನ ಬಂದು ಕೆಂಗುರಿ ಮಲ್ಲಪ್ಪ ಸಾಯುತ್ತಾನೆ. ಚೆನ್ನಮ್ಮ

ಕೂಲಿ ಮಾಡಲು ಮಗ ಜುಂಜಪ್ಪ ಒಪ್ಪುವುದಿಲ್ಲ. ಅವನಿಗೆ ಅವಳ ಶೀಲದ ಕಾಳಜಿ. 'ನಾನು ಹಗಲೆಲ್ಲ ಕೂಲಿ ಮಾಡಿ ಸಂಜೆಯೊಳಗೆ ಮನೆಗೆ ಬರಬೇಕು. ತಡವಾಗಿ ಬಂದರೆ ಮನೆಗೆ ಸೇರಿಸುವುದಿಲ್ಲ' ಎಂಬ ಷರತ್ತನ್ನು ಒಡ್ಡುತ್ತಾನೆ. ಕಾಡಿಗೆ ಹೋಗಿದ್ದ ಚೆನ್ನಮ್ಮನಿಗೆ ಮುಳ್ಳುತಾಗಿ ಬಟ್ಟೆಯಿಲ್ಲದವಳಾಗುತ್ತಾಳೆ. ಮರಳಿ ಬಂದ ತಾಯಿಯನ್ನು ಹಟ್ಟಿಯೊಳಗೆ ಸೇರಿಸದೆ ಮಗ ಪರೀಕ್ಷೆಗಳನ್ನು ಒಡ್ಡುತ್ತಾನೆ. ಜುಂಜಪ್ಪ ಒಡ್ಡುವ ಎಲ್ಲ ಪರೀಕ್ಷೆಗಳನ್ನು ಯಶಸ್ವಿಯಾಗಿ ಗೆದ್ದು ಚೆನ್ನಮ್ಮ ತನ್ನ ಶೀಲ ಶುದ್ಧತೆಯನ್ನು ಪ್ರಮಾಣೀಕರಿಸುತ್ತಾಳೆ. ಹೀಗೆ ಜನಪದ ಮಹಾಕಾವ್ಯದ ಹೆಣ್ಣುಗಳು ಸ್ಥಾಪಿತ ಪಾತಿವ್ರತ್ಯದ ಚೌಕಟ್ಟನ್ನು ಮೀರಿಯೂ ಪುರುಷ ಒಡ್ಡುವ ದಿವ್ಯಗಳನ್ನು ಗೆಲ್ಲುತ್ತಾರೆ. ಪಾತಿವ್ರತ್ಯದ ಪೊಳ್ಳು ನಂಬಿಕೆಗಳನ್ನು ಒಡೆಯುತ್ತಾರೆ.

ಒಟ್ಟಿನಲ್ಲಿ ಕನ್ನಡ ಜನಪದ ಸ್ತ್ರೀಯ ಎಲ್ಲ ಮುಖಗಳನ್ನು ನೋಡಿದಾಗ ಮಗಳಾಗಿ, ಸೊಸೆಯಾಗಿ, ಹೆಂಡತಿಯಾಗಿ, ತಾಯಿಯಾಗಿ, ಅತ್ತೆಯಾಗಿ, ಬಂಜೆಯಾಗಿ, ವಿಧವೆಯಾಗಿ, ಕಂಡುಬರುವುದು ಬರೀ ನೋವೇ ಹೊರತು ಸಂತೋಷವಲ್ಲ. ಕುಟುಂಬದಲ್ಲಿರುವವರ ಆಸೆ-ಆಕಾಂಕ್ಷೆಗಳನ್ನು ಪೂರೈಸುತ್ತ, ಅವರೆಲ್ಲರೂ ಕೊಟ್ಟ ನೋವನ್ನೆಲ್ಲ ನುಂಗುತ್ತ ಬಾಳಿದರು. ಅಲ್ಲಿ ಏನು ಸಿಗದಾದಾಗ ನಿಟ್ಟುಸಿರಿಟ್ಟು ಕುಟುಂಬದಲ್ಲಿರುವ ಯಾವ ವ್ಯಕ್ತಿಯನ್ನು ಹಳಿಯದೆ ತನ್ನ ದೈವವನ್ನು ತಾನೇ ಹಳಿದುಕೊಂಡು 'ಮರವಾಗಿ ಹುಟ್ಟಿದರೆ ಅದೆಷ್ಟೋ ಪಾಲು ಉತ್ತಮವಿರುತ್ತಿತ್ತು' ಎನ್ನುವ ನಿರ್ಧಾರಕ್ಕೆ ಬಂದು ಬಿಡುತ್ತಾಳೆ. ಜನಪದ ಸ್ತ್ರೀಗೆ ಕುಟುಂಬವೇ ಅವಳ ಪಾಲಿಗೆ ಹಿರಿಯ ಜಗತ್ತು. ಇಂತಹ ಹಿರಿಯ ಜಗತ್ತಿನಲ್ಲಿ ತ್ಯಾಗ, ಸಹಕಾರ, ಹೊಂದಾಣಿಕೆ, ಪ್ರೀತಿ, ಸಹನೆ, ಮೊದಲಾದ ಸೂತ್ರಗಳನ್ನು ಹಿಡಿದು 'ಈಸಬೇಕು ಇದ್ದು ಜೈಸಬೇಕು' ಎಂದು ಹೋರಾಡುವಳು. ಹೀಗೆ, ಸ್ತ್ರೀಯು ಸಮಷ್ಟಿ ಸಮಸ್ಯೆಯನ್ನು ವ್ಯಷ್ಟಿ ಸಮಸ್ಯೆಯಾಗಿ ಪಡೆದು ಊರಿನ ಉಪಕಾರಕ್ಕಾಗಿ ಕೆರೆಗೆ ಹಾರವಾದವರ, ಕೋಟೆಗೆ ಬಲಿಯಾದವರ, ಸತಿ ಹೋದವರ ಸಂಕಟಮಯ ಬದುಕಿಗೆ ಮನಮಿಡಿದು ಕಥಾ ನಕ್ಷೆಗಳನ್ನು ಹೆಣೆದು ಹಾಡುವಲ್ಲಿ ಆ ಸಂದರ್ಭ ಕುರಿತ ಸಂವೇದನೆ ವ್ಯಕ್ತವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಸುಮಂಗಲಾ ಅತ್ತಿಗೇರಿ, (2019), ಜಾನಪದ ಮತ್ತು ಮಹಿಳೆ ಅನನ್ಯತೆಯ ನೆಲೆಗಳು, ಎಸ್.ಎಲ್.ಎನ್ ಪಬ್ಲಿಕೇಷನ್, ಬೆಂಗಳೂರು.
2. ಸಂದ್ಯಾರೆಡ್ಡಿ ಕೆ.ಆರ್., (2003), ಮಹಿಳಾ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
3. ಶಕುಂತಲಾ ಸಿ. ದುರಗಿ, (2018), ಜನಪದ ಮಹಿಳೆಯ ಜೀವಪರ ಧ್ವನಿ, ಕನ್ನಡ ನಾಡು ಲೇಖಕರ ಮತ್ತು ಓದುವವರ ಸಹಕಾರ ಸಂಘ, ಕಲಬುರಗಿ.
4. ಪರಮಶಿವಯ್ಯ ಜಿ.ಶಂ., (1970), ಕನ್ನಡ ಜನಪದ ಕಥೆಗಳು, ಸಾಗರ ಪ್ರಕಾಶನ, ಬೆಂಗಳೂರು.
5. ವಿಜಯಶ್ರೀ ಶಬರದ, (2006), ಜಾನಪದ ಮತ್ತು ಮಹಿಳೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಗುರುದೇವಿ ಹುಲೆಪ್ಪನವರಮಠ, (2020), ಜನಪದ (ಮಹಿಳಾ ಸಾಹಿತ್ಯ ಸಂಪುಟ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.